# ಭಾರತೀಯ ಸಂಸ್ಕೃತಿಗೆ ಸ್ವಾಮಿ ವಿವೇಕಾನಂದರ ಕೊಡುಗೆ

**ಸ್ವಾಮಿ ಶಾಂತಿವ್ರತಾನಂದ**

ಸ್ವತಂತ್ರ ಭಾರತದ ಮುಂಬೆಳಗಿನಲ್ಲಿ ಭಾರತೀಯ ಸಂಸ್ಕೃತಿಯ ಪ್ರಭೆಯನ್ನು ಜಗತ್ತಿನೆಲ್ಲೆಡೆ ಬೆಳಗಿದ ಧ್ರುವತಾರೆಯೇ ಸ್ವಾಮಿ ವಿವೇಕಾನಂದರು. ಅವರು ನಮ್ಮ ಸಂಸ್ಕೃತಿಯ ಪುನರುತ್ಥಾನಕ್ಕೆ ನೀಡಿದ ಕೊಡುಗೆಯ ಬಗ್ಗೆ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು 'ವಿವೇಕಪ್ರಭ' ದಲ್ಲಿ ಅನೇಕ ಸ್ಫೂರ್ತಿದಾಯಕ ಲೇಖನಗಳನ್ನು ಬರೆದಿದ್ದಾರೆ.

ಆಧುನಿಕ ಭಾರತದ ನಿರ್ಮಾತೃಗಳಲ್ಲಿ ಸ್ವಾಮಿ ವಿವೇಕಾನಂದರು ಮಹೋನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ದೇಶದಲ್ಲಿ ಜನಿಸಿದ ಸರ್ವಕಾಲಿಕ ಪರಮಶ್ರೇಷ್ಠ ದೇಶಭಕ್ತರಲ್ಲಿ, ಸಂತರಲ್ಲಿ, ಪ್ರವಾದಿಗಳಲ್ಲಿ ಅವರೂ ಒಬ್ಬರು. ಪಂಡಿತ್ ಜವಾಹರ ಲಾಲ್ ನೆಹರು ಹೇಳುತ್ತಾರೆ, ''ಇಂದಿನ ಯುವ ಪೀಳಿಗೆಯಲ್ಲಿ ಎಷ್ಟು ಜನ ಸ್ವಾಮಿ ವಿವೇಕಾನಂದರ ಭಾಷಣಗಳನ್ನು ಮತ್ತು ಕೃತಿಗಳನ್ನು ಓದುತ್ತಾರೋ ನನಗೆ ತಿಳಿದಿಲ್ಲ. ಆದರೆ ಇಷ್ಟನ್ನಂತೂ ಹೇಳಬಲ್ಲೆ, ನನ್ನ ಪೀಳಿಗೆಯವರಲ್ಲಿ ಅನೇಕರು ಅವರಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ. ಈಗಿನ ಪೀಳಿಗೆಯವರೂ ಅವರ ಸಾಹಿತ್ಯವನ್ನು ಓದಿಕೊಂಡರೆ ಬಹಳ ಒಳ್ಳೆಯದು. ಅವುಗಳಿಂದ ಅವರು ಕಲಿಯುವುದು ಬಹಳಷ್ಟಿದೆ. ... ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರು ಆಧುನಿಕ ಭಾರತದ ಮೇಲೆ ಭಾರಿ ಪ್ರಭಾವ ಬೀರಿದ್ದಾರೆ. ಯುವಜನತೆ ಅವರ ಮೂಲಕ ಚಿಮ್ಮುವ ಜ್ಞಾನದ ಸೆಲೆಯ, ಸ್ಫೂರ್ತಿಯ ಸೆಲೆಯ, ಚೈತನ್ಯದ ಸೆಲೆಯ ಉಪಯೋಗವನ್ನು ಮಾಡಿಕೊಳ್ಳುವರೆಂದು ಭಾವಿಸುತ್ತೇನೆ.'' ಶ್ರೀ ರವೀಂದ್ರನಾಥ ಠಾಕೂರರು ನೊಬೆಲ್ ಪುರಸ್ಕೃತ ಫ್ರೆಂಚ್ ಸಾಹಿತಿ ರೋಮಾ ರೋಲಾಗೆ ಹೇಳಿದರು, ''ನೀವು ಭಾರತವನ್ನು ಅರಿಯಬೇಕಿದ್ದರೆ ವಿವೇಕಾನಂದರನ್ನು ಅಧ್ಯಯನ ಮಾಡಿ. ಅವರಲ್ಲಿದ್ದುದೆಲ್ಲವೂ ಇತ್ಯಾತ್ಮಕವೇ, ನೇತ್ಯಾತ್ಮಕ ಎಂಬುದು ಇರಲೇ ಇಲ್ಲ.''

## ಸಂಸ್ಕೃತಿ – ಅದರ ಅರ್ಥ

ಸಂಸ್ಕೃತಿ ಎಂಬುದು ಸಂಸ್ಕೃತ ಪದ. 'ಸಂಸ್ಕೃ' ಅಥವಾ 'ಸಂಸ್ಕರಣ' ಎಂದರೆ ಪರಿಷ್ಕರಣಗೊಳಿಸುವುದು, ಶುದ್ಧಗೊಳಿಸುವುದು ಎಂದರ್ಥ. ಸಂಸ್ಕೃತಿ ಎಂದರೆ ಪರಿಷ್ಕೃತಗೊಂಡ, ಪರಿಶುದ್ಧಗೊಂಡ, ಕಶ್ಮಲಗಳಿಂದ ಮುಕ್ತಗೊಂಡ ಸ್ಥಿತಿ ಎಂದರ್ಥ. ಇಂಗ್ಲಿಷ್ ಪದ 'ಕಲ್ಚರ್' ಕೂಡ ಇದೇ ಅರ್ಥವನ್ನು ಕೊಡುತ್ತದೆ. ಇದರ ವ್ಯುತ್ಪತ್ತಿ ಲ್ಯಾಟಿನ್ ಪದ 'ಕಲ್ಚರ್' ಎಂಬುದರಿಂದ ಆಗಿದೆ. ಕಲ್ಚರ್ ಎಂದರೆ ಉಳುವುದು, ಮಣ್ಣನ್ನು ಸಂಸ್ಕರಿಸುವುದು ಅಥವಾ ಉತ್ತಮಗೊಳಿಸುವುದು. ಅಗ್ರಿಕಲ್ಚರ್ ಎಂದರೆ ಭೂಮಿ



ಯನ್ನು ಉತ್ತು, ಕಳೆ, ಮುಳ್ಳು, ಕಲ್ಲು, ಇತ್ಯಾದಿಗಳನ್ನು ತೆಗೆದು ಬೆಳೆಗಳನ್ನು ಬೆಳೆಯಲು ಸೂಕ್ತವಾಗುವಂತೆ ಪರಿಷ್ಕರಿಸುವುದು.

ಯುನೆಸ್ಕೋದ ಒಂದು ವಿವರಣೆಯ ಪ್ರಕಾರ ಕಲ್ಚರ್ ಎಂದರೆ, ''ಒಂದು ಸಮಾಜದ ಅಥವಾ ಸಮೂಹದ ಒಂದಷ್ಟು ವಿಶಿಷ್ಟವಾದ ಆಧ್ಯಾತ್ಮಿಕ, ಭೌತಿಕ, ಬೌದ್ಧಿಕ ಮತ್ತು ಭಾವನಾತ್ಮಕ ಲಕ್ಷಣಗಳು, ಮತ್ತು ಇದರಲ್ಲಿ ಕಲೆ ಮತ್ತು ಸಾಹಿತ್ಯದ ಜೊತೆಗೆ ಜೀವನಶೈಲಿಗಳು ಹಾಗೂ ಕೂಡು ಬಾಳ್ವೆಯ ಪದ್ಧತಿಗಳು, ಮೌಲ್ಯ ವ್ಯವಸ್ಥೆಗಳು, ಆಚರಣೆಗಳು ಮತ್ತು ನಂಬಿಕೆಗಳು ಸೇರುತ್ತವೆ.''

ಪ್ರತಿಯೊಂದು ಸಂಸ್ಕೃತಿಯೂ ಅನನ್ಯವೇ. ಕಾರಣ, ಅದು ಆಯಾ ಜನರ ಸಹಜ ಸ್ವಭಾವಗಳನ್ನು ಪ್ರತಿಫಲಿಸುತ್ತದೆ. ಭಾರ

ತೀಯ ಸಂಸ್ಕೃತಿಯನ್ನು, ಮನಸ್ಸನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದ್ದರೆ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳ ಅಧ್ಯಯನ ಅತ್ಯಗತ್ಯ. ಸ್ವಾಮಿ ವಿವೇಕಾನಂದರೇ ತಮ್ಮನ್ನು **'ಸಂಗ್ರಹ ಭಾರತ'** ಎಂದು ಕರೆದುಕೊಂಡಿದ್ದಾರೆ. ಆಧುನಿಕ ಸಂದರ್ಭಗಳ ಹಿನ್ನೆಲೆಯಲ್ಲಿ ಶಾಸ್ತ್ರಗಳ, ತತ್ತ್ವಗಳ ಮತ್ತು ಜೀವನದ ಬಗ್ಗೆ ಅವರು ನೀಡಿರುವ ವ್ಯಾಖ್ಯಾನಗಳು ಭಾರತೀಯ ಸಂಸ್ಕೃತಿಯ ಪುನಶ್ಚೇತನಕ್ಕೆ ಕಾರಣವಾಗಿವೆ.

ಪ್ರತಿಯೊಂದು ನಾಗರಿಕತೆಗೂ, ಸಂಸ್ಕೃತಿಗೂ ಒಂದು ಜೀವ ಬಿಂದುವಿರುತ್ತದೆ; ಆಯಾ ನಾಗರಿಕತೆಯ ಅತಿ ಮುಖ್ಯ ಲಕ್ಷಣ ಅಥವಾ ಪ್ರವೃತ್ತಿಯೇ ಅದರ ಜೀವ ಬಿಂದುವಾಗಿರುತ್ತದೆ ಎಂದು ವಿವೇಕಾನಂದರು ತೋರಿಸಿಕೊಟ್ಟರು. ಒಂದು ಸಂಸ್ಕೃತಿಯ ಇರವು ಆ ಜೀವ ಬಿಂದುವನ್ನು ಆಧರಿಸಿರುತ್ತದೆ. ಭಾರತದ ಇತಿಹಾಸವನ್ನು ಅವಲೋಕಿಸಿದರೆ ತಿಳಿಯುತ್ತದೆ, ಒಬ್ಬರ ಹಿಂದೆ ಒಬ್ಬರಂತೆ ದಾಳಿಕೋರರು ಈ ಪವಿತ್ರ ಭೂಮಿಯ ಮೇಲೆ ಆಕ್ರಮಣ ಮಾಡುತ್ತಲೇ ಬಂದಿದ್ದಾರೆ. ಇನ್ಯಾವುದೇ ರಾಷ್ಟ್ರದ ಮೇಲೆ ಇಂತಹ ದಾಳಿಗಳಲ್ಲಿ ಶೇಕಡ ಹತ್ತರಷ್ಟು ನಡೆದಿದ್ದರೂ ಆ ರಾಷ್ಟ್ರ ಹೇಳಹೆಸರಿಲ್ಲದಂತೆ ಧೂಳೀಪಟವಾಗಿರುತ್ತಿತ್ತು; ಆದರೆ ಭಾರತ ಇನ್ನೂ ಜೀವಂತವಾಗಿದೆ; ಇದಕ್ಕೆ ಕಾರಣ ಅದರ ಆಧ್ಯಾತ್ಮಿಕ ಶಕ್ತಿ ಎನ್ನುತ್ತಾರೆ ಸ್ವಾಮೀಜಿ: ''ಮಾನವಕುಲ ಅವನತಿ ಹೊಂದುತ್ತಿದ್ದಾಗಲೆಲ್ಲ ಈ ನೆಲದಿಂದ ಆಧ್ಯಾತ್ಮಿಕತೆಯ ಮತ್ತು ಉದಾತ್ತ ತತ್ತ್ವಗಳ ಪ್ರಚಂಡ ಅಲೆಗಳು ಎದ್ದು ಜಗತ್ತನ್ನು ರಕ್ಷಿಸಿವೆ. ಈಗಲೂ ಅಷ್ಟೇ, ಇಲ್ಲಿಂದಲೇ ಜೀವ ಮತ್ತು ಚೈತನ್ಯದಾಯಕ ಅಲೆಗಳು ಹೊರಡುವುದು. ಇದೇ ಭಾರತ, ಶತಶತಮಾನಗಳ ಕಾಲ ಭೀಕರ ಆಘಾತಗಳನ್ನು, ಅನ್ಯ ದೇಶಗಳ ನೂರಾರು ಆಕ್ರಮಣಗಳನ್ನು, ಸಂಪ್ರದಾಯ ಮತ್ತು ಆಚರಣೆಗಳಲ್ಲಿನ ನೂರಾರು ವಿಪ್ಲವಗಳನ್ನು ಎದುರಿಸಿ ನಿಂತಿದೆ. ಬತ್ತದ ಚೈತನ್ಯ ಮತ್ತು ಅಳಿವಿಲ್ಲದ ಜೀವಂತಿಕೆಯಿಂದ ಅದು ಜಗತ್ತಿನಲ್ಲಿರುವ ಯಾವುದೇ ಶಿಲೆಗಿಂತ ಗಟ್ಟಿಯಾಗಿ ನಿಂತಿದೆ. ಇದಕ್ಕೆ ಕಾರಣ ಭಾರತ ಎಂದರೆ ಅದೊಂದು ಭೌತಿಕ ಅಸ್ತಿತ್ವವಲ್ಲ, ಆದಿ ಅಂತ್ಯಗಳೆ ಇಲ್ಲದ ಅವಿನಾಶಿ ಆತ್ಮ. ಇಂತಹ ನೆಲದ ಸುತರು ನಾವು.''

ವಿವೇಕಾನಂದರ ಪ್ರಕಾರ ಭಾರತದ ಜೀವ ಬಿಂದು ಆಧ್ಯಾತ್ಮಿಕತೆ ಎಂದು ಹೇಳಿದೆವು. ಅವರು ಭಾರತದ ಶ್ರೇಷ್ಠ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಭಾರತೀಯರಿಗೆ ಸರಿಯಾಗಿ ಅರ್ಥ ಮಾಡಿಸಿದರು; ತಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಮೂಡಿಸಿದರು. ಮುಂದುವರೆಸುತ್ತಾ ಹೇಳುತ್ತಾರೆ: ''ಸುಮ್ಮನೆ ಒಂದಷ್ಟು ವಿಷಯಗಳನ್ನು ತಿಳಿದರೇನಾಯಿತು? ಆಘಾತಗಳನ್ನು ತಡೆದುಕೊಳ್ಳುವ ಶಕ್ತಿ ನೀಡುವುದು ಸಂಸ್ಕೃತಿ (ಸಂಸ್ಕಾರ). ಜಗತ್ತಿಗೆ ಎಷ್ಟಾದರೂ ಜ್ಞಾನವನ್ನು ತುಂಬಿಸಿ, ಅದರಿಂದ ಅಷ್ಟೇನೂ ಪ್ರಯೋಜನವಾಗಲಾರದು. ಸಂಸ್ಕೃತಿ ಎಂಬುದು ರಕ್ತದಲ್ಲೆ ಬಂದಿರಬೇಕು. ಆಧುನಿಕ ಸಂದರ್ಭವನ್ನೆ ನೋಡಿ. ಎಷ್ಟೋ ರಾಷ್ಟ್ರಗಳು ಜ್ಞಾನದ ರಾಶಿಗಳನ್ನೇ ಹೊಂದಿವೆ. ಆದರೆ ಆ ರಾಷ್ಟ್ರಗಳು ಹೇಗಿವೆ? ಕ್ರೂರ ಹುಲಿಗಳಂತಿವೆ. ಕಾರಣ ಸಂಸ್ಕೃತಿಯ ಅಭಾವ. ನಾಗರಿಕತೆ ಮತ್ತು ಜ್ಞಾನ ಇವೆಲ್ಲ ಕೇವಲ ಮೇಲಿನ ತೊಗಲಿದ್ದಂತೆ. ಸ್ವಲ್ಪ ಕೆರೆದರೆ ಸಾಕು ಒಳಗಿರುವ ಸಹಜವಾದ ಪಾಶವೀ ಪ್ರವೃತ್ತಿ ರಭಸದಿಂದ ಹೊರ ಬರುತ್ತದೆ.''

### ಭಾರತೀಯತೆಯ ಹರಿಕಾರ

ಅನೇಕ ಪ್ರಮುಖ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ವಾಮಿ ವಿವೇಕಾನಂದರ ಬರಹಗಳು ಸ್ಫೂರ್ತಿ ನೀಡಿದ್ದವು. ಉದಾಹರಣೆಗೆ: ಮಹಾತ್ಮಾ ಗಾಂಧೀಜಿ, ಜವಾಹರಲಾಲ್ ನೆಹರು, ಸುಭಾಷ್‌ಚಂದ್ರ ಬೋಸ್, ಬಾಲ ಗಂಗಾಧರ ತಿಲಕ್, ಮುಂತಾದವರು. ರಾಮಕೃಷ್ಣ ಮಠದ ಕೇಂದ್ರಸ್ಥಾನವಾದ ಬೇಲೂರು ಮಠಕ್ಕೆ ಭೇಟಿ ನೀಡಿದ ನಂತರ ಮಹಾತ್ಮಾ ಗಾಂಧಿ ಹೇಳಿದರು, ''ನಾನು ಸ್ವಾಮೀಜಿಯವರ ಕೃತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಓದಿದ್ದೇನೆ. ತದನಂತರ ನನ್ನ ದೇಶಪ್ರೇಮ ಸಾವಿರ ಮಡಿಯಾಗಿದೆ.''

ಭಾರತ ಅತ್ಯಂತ ವೈವಿಧ್ಯಮಯ ದೇಶ. ಅಸಂಖ್ಯ ಭಾಷೆಗಳು, ಜನಾಂಗಗಳು, ಐತಿಹಾಸಿಕ ಮತ್ತು ಪ್ರಾದೇಶಿಕ ಭಿನ್ನತೆಗಳಿಂದ ಕೂಡಿದೆ. ಆದರೂ ಈ ಎಲ್ಲ ವೈವಿಧ್ಯತೆಗಳ ನಡುವೆಯೂ ಅದು ಎಂದಿಗೂ ತನ್ನ ಸಾಂಸ್ಕೃತಿಕ ಐಕ್ಯತೆಯನ್ನು ಭದ್ರವಾಗಿ ಕಾಪಾಡಿಕೊಂಡುಬಂದಿದೆ. ಆಧುನಿಕ ಸಮಯದಲ್ಲಿ, ಭಾರತೀಯರು ತಮ್ಮ ದೇಶದ ಬಗ್ಗೆ ಅಭಿಮಾನಶೂನ್ಯರಾಗಿದ್ದಂತಹ ದುಃಸ್ಥಿತಿಯ ಸಂದರ್ಭದಲ್ಲಿ, ನಮ್ಮ ಸಂಸ್ಕೃತಿಯ ಒಳಗುಟ್ಟನ್ನು ಮೊಟ್ಟಮೊದಲಬಾರಿಗೆ ತಿಳಿಸಿಕೊಟ್ಟಿದ್ದು ಸ್ವಾಮಿ ವಿವೇಕಾನಂದರು. ಅವರು ಈ ಸಂಸ್ಕೃತಿಯ ನಿಜವಾದ ಆಧಾರಸ್ತಂಭಗಳು ಯಾವುವು ಎಂಬುದನ್ನು ಸ್ಪಷ್ಟವಾಗಿ ಗುರುತಿಸಿದರು. ಈ ಪರಿಯ ವೈವಿಧ್ಯಮಯ ರಾಷ್ಟ್ರವನ್ನು ಒಂದಾಗಿರಿಸಲು ಮಾನವತ್ವದ ಹಾಗೂ ಭ್ರಾತೃತ್ವದ ಮನೋಭಾವಗಳು ಅವಶ್ಯ ಎಂದು ಬೋಧಿಸಿದರು. ಇದರಿಂದಾಗಿ ಭಾರತದ ಐಕ್ಯತೆಗೆ ಮತ್ತಷ್ಟು ಬಲ ಬಂದಂತಾಯಿತು.

ಪ್ರಖ್ಯಾತ ಇತಿಹಾಸಜ್ಞ ಕೆ.ಎಂ. ಪಣಿಕ್ಕರ್ ಹೇಳುವಂತೆ, ''ಭಾರತೀಯರ ರಾಷ್ಟ್ರೀಯತೆಗೆ ಅಗತ್ಯವಾದ ಚೈತನ್ಯ ದೊರೆಯುವುದಕ್ಕೆ, ಮತ್ತು ಹಿಂದೂಗಳಲ್ಲಿ ತಾವೆಲ್ಲ ಒಂದು ಎಂಬ ಭಾವನೆ ಮೂಡಿ ಭಾರತದ ಬಹುಭಾಗ ಏಕವಾಗಲು ಮುಖ್ಯ ಕಾರಣರೆಂದರೆ ಸ್ವಾಮಿ ವಿವೇಕಾನಂದರು.... ಅವರು ಹಿಂದೂ ಚಳವಳಿಗೆ ರಾಷ್ಟ್ರೀಯತೆಯ ಅರ್ಥವನ್ನು ನೀಡಿದರು ಮತ್ತು ಅವರಿಂದಾಗಿ ಬಹುತೇಕ ಚಳವಳಿಗಳಿಗೆ ಒಂದು ಅಖಿಲ-ಭಾರತ ಸ್ವರೂಪ ದೊರೆಯಿತು.''

ಬಡತನ, ಲೌಕಿಕ ಜ್ಞಾನದ ಕೊರತೆ ಇದ್ದರೂ ಭಾರತೀಯರು ವಿಶ್ವಸಂಸ್ಕೃತಿಗೆ ಬಹು ದೊಡ್ಡ ಕೊಡುಗೆ ನೀಡುವುದಿದೆ ಎಂದು

ಭಾರತೀಯರಿಗೆ ಅರ್ಥಮಾಡಿಸಿದವರು ಸ್ವಾಮಿಜಿ. ನಮ್ಮಲ್ಲಿ ಐಹಿಕ ಸೌಕರ್ಯಗಳ ದಾರಿದ್ರ್ಯವಿದ್ದರೆ ಪಾಶ್ಚಿಮಾತ್ಯರಲ್ಲಿ ಆಧ್ಯಾತ್ಮಿಕತೆಯ ದಾರಿದ್ರ್ಯವಿದೆ; ಅಧ್ಯಾತ್ಮದ ವಿಷಯದಲ್ಲಿ ಭಾರತಕ್ಕೆ ಒಂದು ಜಾಗತಿಕ ಮಟ್ಟದ ಹೊಣೆ ಇದೆ ಎಂಬುದನ್ನು ಸ್ಪಷ್ಟವಾಗಿ ಅರ್ಥ ಮಾಡಿಸಿದರು.

ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಬರೆಯುತ್ತಾರೆ, ''ಸ್ವಾಮಿ ವಿವೇಕಾನಂದರು ಹಳೆ ಬೇರು ಹೊಸ ಚಿಗುರಿನ ಸಂಯೋಗದಂತಿದ್ದರು. ಭಾರತದ ಶ್ರೇಷ್ಠತೆಯ ಬಗ್ಗೆ ಅತೀವ ಹೆಮ್ಮೆಯನ್ನು ಹೊಂದಿದ್ದ ಅವರು ಭಾರತದ ಪ್ರಾಚೀನ ನೆಲೆಗಟ್ಟಿನಲ್ಲಿ ಭದ್ರವಾಗಿ ನಿಂತು ಭಾರತದ ಆಧುನಿಕ ಸಮಸ್ಯೆಗಳಿಗೆ ಆಧುನಿಕ ಪರಿಹಾರಗಳನ್ನು ನೀಡಿದ್ದಾರೆ. ಅವರು ಹಳತು ಮತ್ತು ಹೊಸತಿನ ನಡುವಣ ಒಂದು ಕೊಂಡಿಯಂತಿದ್ದರು... ಖಿನ್ನವಾಗಿದ್ದ ಮತ್ತು ಸ್ಥೈರ್ಯಗೆಟ್ಟಿದ್ದ ಹಿಂದುವಿನ ಮನಸ್ಸಿಗೆ ಸ್ಫೂರ್ತಿ ನೀಡಿದರು, ಆತ್ಮವಿಶ್ವಾಸ ತುಂಬಿದರು, ತಮ್ಮ ಪ್ರಾಚೀನ ಮೂಲದ ಬಗ್ಗೆ ಹೆಮ್ಮೆಯನ್ನು ಮೂಡಿಸಿದರು.'' ನೇತಾಜಿ ಸುಭಾಷ್‌ಚಂದ್ರ ಬೋಸ್ ಬರೆಯುತ್ತಾರೆ: ''ಸ್ವಾಮೀಜಿ ಪೂರ್ವ ಮತ್ತು ಪಶ್ಚಿಮಗಳ; ಧರ್ಮ ಮತ್ತು ವಿಜ್ಞಾನಗಳ; ಪ್ರಾಚೀನ ಹಾಗೂ ಆಧುನಿಕತೆಗಳ ಸಮನ್ವಯಕಾರರಾಗಿದ್ದರು. ಆದ್ದರಿಂದಲೇ ಅವರು ಓರ್ವ ಶ್ರೇಷ್ಠ ವ್ಯಕ್ತಿಯಾಗಿದ್ದು. ಅವರ ಬೋಧನೆಗಳಿಂದಾಗಿ ನಮ್ಮ ದೇಶವಾಸಿಗಳು ಆತ್ಮಗೌರವವನ್ನು, ಆತ್ಮನಿರ್ಭರತೆಯನ್ನು ಮತ್ತು ತಮ್ಮ ಹಕ್ಕನ್ನು ದೃಢವಾಗಿ ಪ್ರತಿಪಾದಿಸುವ ಧೈರ್ಯವನ್ನು ಪಡೆದುಕೊಂಡರು.''

## ಭಾರತೀಯ ಸಂಸ್ಕೃತಿಯ ತಾಯಿ ಬೇರು ಸಂಸ್ಕೃತ ಭಾಷೆ

ಸ್ವಾಮಿ ವಿವೇಕಾನಂದರ ಪ್ರಕಾರ ಭಾರತೀಯ ಸಂಸ್ಕೃತಿಯನ್ನು ಕಾಪಾಡುವ ತಾಯಿ ಬೇರು ಎಂದರೆ ಸಂಸ್ಕೃತ ಭಾಷೆ, ಈ ಭಾಷೆಗೆ ಜಾತಿ, ಮತ ಇತ್ಯಾದಿ ಎಲ್ಲ ಬಗೆಯ ಭೇದಗಳನ್ನು ತೊಡೆದುಹಾಕುವ ಶಕ್ತಿ ಇದೆ. ಅವರೇ ಹೇಳುವಂತೆ:

''ಸಂಸ್ಕೃತ ಭಾಷೆಗೆ ಯಾವಾಗಲೂ ಪ್ರಾಶಸ್ತ್ಯ ನೀಡಬೇಕು. ಏಕೆಂದರೆ ಆ ಹೆಸರಿನಲ್ಲೆ ಒಂದು ಘನತೆ ಮತ್ತು ಶಕ್ತಿ ಇದೆ. ರಾಮಾನುಜ, ಚೈತನ್ಯ ಮತ್ತು ಕಬೀರರಂತಹ ಮಹಾತ್ಮರ ಪ್ರಯತ್ನಗಳ ಫಲವಾಗಿ ಅವರ ಜೀವಿತ ಕಾಲಗಳಲ್ಲಿ ಭಾರತದ ನಿಮ್ನ ವರ್ಗಗಳ ಜನರು ಏಳಿಗೆ ಹೊಂದಿದರು; ಆದರೆ ನಂತರದಲ್ಲಿ ಏಕೆ ನಾವು ವಿಫಲರಾದೆವು ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ಈ ಮಹಾ ಪ್ರವಾದಿಗಳು ಕಾಲವಾದ ಸುಮಾರು ನೂರು ವರ್ಷಗಳ ಒಳಗೇ ಅವರ ಬೋಧನೆಗಳು ಪ್ರಭಾವ ಬೀರುವುದನ್ನು ನಿಲ್ಲಿಸಿದವು. ಇದರ ಹಿಂದಿರುವ ಸೂಕ್ಷ್ಮವಾದ ಕಾರಣವನ್ನು ಅರ್ಥಮಾಡಿಕೊಳ್ಳಬೇಕಿದೆ. ಅವರು ನಿಮ್ನ ವರ್ಗಗಳ ಜನರ ಏಳಿಗೆಗೆ ಬಹಳವಾಗಿ ಶ್ರಮಿಸಿದರು ನಿಜ. ಆದರೆ, ಅವರು ಜನಸಾಮಾನ್ಯರಿಗೆ ಸಂಸ್ಕೃತ ಭಾಷೆಯ ಮಹತ್ತ್ವದ ಬಗ್ಗೆ ತಿಳಿಸಲಿಲ್ಲ... ಹಿಂದೆ ಭಗವಾನ್ ಬುದ್ಧ ಕೂಡ ಇದೇ ತಪ್ಪನ್ನು ಎಸಗಿದ್ದ, ಜನ ಸಾಮಾನ್ಯರು ಸಂಸ್ಕೃತವನ್ನು ಕಲಿಯದಂತೆ ಮಾಡಿದ. ಅವನಿಗೆ ತಕ್ಷಣ ಫಲಿತಾಂಶಗಳು ಬೇಕಿದ್ದವು. ಸಂಸ್ಕೃತ ಸಾಹಿತ್ಯವನ್ನು ಆಗ ಪ್ರಚಲಿತವಾಗಿದ್ದ ಪಾಳಿ ಭಾಷೆಗೆ ಅನುವಾದಿಸಿದ, ಪಾಳಿಯಲ್ಲೆ ಬೋಧಿಸಿದ. ಜನರಿಗೆ ಆಪ್ತವಾಗಿದ್ದ ಭಾಷೆಯನ್ನು ಬಳಸಿದ್ದರಿಂದ ಜನರು ಅವನನ್ನು ಅರ್ಥಮಾಡಿಕೊಂಡರು. ಜನರಿಗೆ ಅವನು ಆಪ್ತನಾದ. ಅದೇನೋ ಸರಿಯೇ. ಏಕೆಂದರೆ ಅವನ ವಿಚಾರಗಳು ಬೇಗ ಮತ್ತು ದೂರದೂರಕ್ಕೆ ಹರಡಿದವು. ಆದರೆ ಅದರ ಜೊತೆ ಜೊತೆಗೇ ಸಂಸ್ಕೃತ ಭಾಷೆಯನ್ನೂ ಹರಡಬೇಕಿತ್ತು. ಜ್ಞಾನ ಪ್ರಸಾರವಾಯಿತಾದರೂ ಘನತೆ ಮಾಯವಾಯಿತು, ಸಂಸ್ಕೃತಿ ಮಾಯವಾಯಿತು. ಜ್ಞಾನದ ರಾಶಿಯೇ ಇದ್ದರೂ ಅಷ್ಟಾಗಿ ಪ್ರಯೋಜನವಿಲ್ಲ. ರಕ್ತದಲ್ಲಿ ಸಂಸ್ಕೃತಿ ಪ್ರವಹಿಸುತ್ತಿರಬೇಕು. ಇಂದಿನ ಆಧುನಿಕ ರಾಷ್ಟ್ರಗಳಲ್ಲಿ ಜ್ಞಾನದ ಅಭಾವವಿಲ್ಲ, ಸಂಸ್ಕೃತಿಯ ಅಭಾವವಿದೆ. ಅದಕ್ಕೆ ಅವುಗಳ ವರ್ತನೆ ಪಶುಸಮಾನವಾಗಿದೆ. ಜ್ಞಾನ ಮತ್ತು ನಾಗರಿಕತೆಗಳು ಕೇವಲ ತೋರಿಕೆಗಳು ಅಷ್ಟೆ. ಸ್ವಲ್ಪ ಪ್ರಚೋದನೆ ಸಿಕ್ಕರೂ ಸಾಕು ಹಳೆಯ ಪಾಶವೀತನ ಹೊರಕ್ಕೆ ನುಗ್ಗುತ್ತದೆ. ಇದೇ ದೊಡ್ಡ ಅಪಾಯ. ಜನರಿಗೆ ಸ್ಥಳೀಯ ಭಾಷೆಗಳನ್ನು ಕಲಿಸಿ ಅವರಲ್ಲಿನ ಕಲ್ಪನಾಶಕ್ತಿಯನ್ನು ಗರಿಗೆದರಿಸಿದರೆ ಸಾಕು. ತಮಗೆ ಅಗತ್ಯವಾದ ಮಾಹಿತಿಯನ್ನು ತಾವೇ ಸಂಗ್ರಹಿಸಿಕೊಳ್ಳುತ್ತಾರೆ. ಮಾಹಿತಿಯನ್ನು ಒದಗಿಸುವುದಕ್ಕಿಂತ ಮಿಗಿಲಾದ ಕೆಲಸವನ್ನು ನೀವು ಮಾಡಬೇಕಿದೆ — ಸಂಸ್ಕೃತಿಯನ್ನು ನೀಡುವುದು. ಅದನ್ನು ನೀಡದೆ ನೀವು ಬೇರೇನನ್ನು ನೀಡಿದರೂ ಜನರ ಪರಿಸ್ಥಿತಿಯನ್ನು ಸುಧಾರಿಸಲಾರಿರಿ. ಸಂಸ್ಕೃತಿಯನ್ನು ನೀಡದೆ ಸುಮ್ಮನೆ ಸಂಸ್ಕೃತವನ್ನು ಕಲಿಸಿದರೆ ಸಂಸ್ಕೃತ ಕಲಿತವರ ಪಂಗಡವೊಂದು ಹುಟ್ಟಿಕೊಳ್ಳುತ್ತದೆ ಮತ್ತು ಅದು ಇತರರನ್ನು ಆಳಲು ಉಪಕ್ರಮಿಸುತ್ತದೆ. ''

## ಭಾರತೀಯ ಸಂಸ್ಕೃತಿ ಮತ್ತು ವೇದಾಂತ ತತ್ತ್ವದ ಮರುವ್ಯಾಖ್ಯಾನ

ಭಾರತೀಯ ಸಂಸ್ಕೃತಿಯ ಮೂಲಾಧಾರವಾಗಿರುವ ವೇದಾಂತ ತತ್ತ್ವವು ಅತ್ಯಂತ ಪ್ರಾಯೋಗಿಕ ಎಂದು ಸ್ವಾಮಿ ವಿವೇಕಾನಂದರು ತೋರಿಸಿಕೊಟ್ಟಿದ್ದಾರೆ. ಉಪನಿಷತ್ತುಗಳು ನೀಡಿರುವ ಅತ್ಯಂತ ಸೂಕ್ಷ್ಮವಾದ ಪರಿಜ್ಞಾನವೆಂದರೆ, ಆತ್ಮ ಮತ್ತು ಬ್ರಹ್ಮದ ನಡುವಿನ ಸಂಬಂಧದ ಬಗೆಗಿನ ಅರಿವು. ಇಡೀ ವೇದಾಂತವೇ ಈ ವಿಷಯದ ಸುತ್ತ ಸುತ್ತುತ್ತದೆ. ಸ್ವಾಮೀಜಿಯವರ '**ಪ್ರತಿಯೊಂದು ಜೀವಿಯೂ ಸುಪ್ತ ದೇವರೆ**', ಎಂಬ ದಿವ್ಯವಾದ ಸೂತ್ರ, ಇಡೀ ವೇದಾಂತದ ಸಾರವನ್ನೆ ಸಂಗ್ರಹಿಸಿದೆ. ಮಾನವ ತನ್ನ ಅಂತರಂಗದ ಶೋಧನೆಯನ್ನು ಏಕೆ ಮಾಡಬೇಕು? ಕೇವಲ ಆಧ್ಯಾತ್ಮಿಕ ಪ್ರಗತಿಗಾಗಿ ಮಾತ್ರವಲ್ಲ, ಅವನ ಅಸ್ತಿತ್ವಕ್ಕೇ ಅದು ಅನಿವಾರ್ಯ. ಭಾರತೀಯ ಸಂಸ್ಕೃತಿಯ ಶ್ರೇಷ್ಠತೆ ಎಂದರೆ ಅದು ವಿಶ್ವಪ್ರೇಮ ಮತ್ತು ಸರಳತೆಗಳನ್ನು ಚಿಕ್ಕವರಿಂದಲೆ ಕಲಿಸುತ್ತದೆ. ಈ ಗುಣಗಳು

ಉದಯಿಸಬೇಕಾದರೆ ಮಾನವ ತನ್ನೊಳಗೆ ಸಹಜವಾಗಿರುವ ದಿವ್ಯತೆಯನ್ನು ಅರಿತುಕೊಳ್ಳಬೇಕು ಎಂಬುದು ಭಾರತೀಯರಿಗೆ ಚೆನ್ನಾಗಿ ತಿಳಿದಿದೆ.

ಆಧುನಿಕ ಕಾಲಘಟ್ಟದಲ್ಲಿ ಸ್ವಾಮೀಜಿ, ಸುಪ್ತ ದೇವರು ಎಂಬ ಅನುಪಮ ತತ್ತ್ವದೆಡೆಗೆ ವಿಶ್ವದ ಗಮನ ಸೆಳೆದಿದ್ದಾರೆ. ಭಾರತೀಯ ಸಂಸ್ಕೃತಿಗೆ ಅವರ ಅತಿದೊಡ್ಡ ಕೊಡುಗೆ ಎಂದರೆ, ಮಾನವ ಸಹಜವಾಗಿಯೇ ದಿವ್ಯ, ಎಂಬ ತಳಹದಿಯ ಮೇಲೆ ವಿಶ್ವಮಾನವ ಸಿದ್ಧಾಂತವನ್ನು ಬೋಧಿಸಿದ್ದು. ಸ್ವಾಮೀಜಿ, ಆದರ್ಶ ಮತ್ತು ವಾಸ್ತವಿಕತೆ ಎರಡಕ್ಕೂ ಸಮನಾದ ಪ್ರಾಧಾನ್ಯ ನೀಡಿದ್ದರು. ದಯಾಪೂರ್ಣರೂ, ದೂರದರ್ಶಿಗಳೂ ಆಗಿದ್ದ ಅವರು ನೊಂದ ಮಾನವರ ಭೌತಿಕ, ಬೌದ್ಧಿಕ, ನೈತಿಕ ಹಾಗೂ ಆಧ್ಯಾತ್ಮಿಕ ಅಗತ್ಯಗಳೆಲ್ಲಕ್ಕೂ ನೆರವಾಗಲು ಪ್ರಯತ್ನಿಸಿದರು. ಸೇವೆಯನ್ನು ಪೂಜೆಯಾಗಿಸಿದರು. ಸಂಘಟಿತ ಸೇವಾ ಕಾರ್ಯಗಳಿಗಾಗಿ ಮಹಾ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಸೇವೆಯ ಮೂಲಕ ಹೇಗೆ ಭಗವಂತನನ್ನು ಪಡೆಯಬಹುದೆಂದು ತಿಳಿಸಿದರು — ಅದೇ '**ಪ್ರಾಯೋಗಿಕ ವೇದಾಂತ.**'

''ನೀವು ನಿಮ್ಮ ಸಹ ಮಾನವರನ್ನು ಪ್ರೀತಿಸುವಿರೇನು?'' ಎಂದು ವಿಶ್ವಮಾನವ ಸ್ವಾಮಿ ವಿವೇಕಾನಂದರು ಕೇಳುತ್ತಾರೆ. ''ದೇವರನ್ನು ಹುಡುಕುತ್ತ ಎಲ್ಲಿ ಅಲೆಯುವಿರಿ? ಬಡವರು, ದೀನರು, ದುಃಖಿಗಳು ದೇವರಲ್ಲವೇನು? ಮೊದಲಿಗೆ ಅವರನ್ನೇಕೆ ಪೂಜಿಸಬಾರದು? ನಮ್ಮಲ್ಲಿ ಪ್ರತಿಯೊಬ್ಬರೂ ಭಾರತದ ಕೋಟ್ಯಂತರ ಶೋಷಿತರಿಗಾಗಿ ಹಗಲಿರುಳೂ ಪ್ರಾರ್ಥಿಸೋಣ.... ನಾನು ಹೇಳುತ್ತೇನೆ: ಬಡವರಿಗಾಗಿ ಯಾರ ಹೃದಯದಿಂದ ರಕ್ತ ಬಸಿಯುತ್ತದೋ ಅವನೇ ಮಹಾತ್ಮ, ಇಲ್ಲದಿದ್ದರೆ ಅವನು ದುರಾತ್ಮ. ಅವರ ಒಳಿತಿಗಾಗಿ ನಾವೆಲ್ಲರೂ ಒಮ್ಮನಸ್ಸಿನಿಂದ ಪ್ರಾರ್ಥಿಸೋಣ. ಈ ಕೆಲಸದಿಂದ ನಮಗೆ ಯಾವುದೇ ಕೀರ್ತಿ, ಅನುಕಂಪೆ ಸಿಗದಿರಬಹುದು, ನಮ್ಮನ್ನು ನೆನೆದು ಯಾರೂ ದುಃಖಿಸದಿರಬಹುದು, ನಾವು ಏನನ್ನೂ ಸಾಧಿಸಲು ಸಾಧ್ಯವಾಗ ದಿರಬಹುದು. ಆದರೆ ನಮ್ಮ ಆಲೋಚನೆಗಳು ಎಂದಿಗೂ ಸಾಯುವುದಿಲ್ಲ. ಈಗಲೋ ನಂತರವೋ, ಅವು ಜೀವ ತಳೆಯು ತ್ತವೆ. ಹೃದಯ ತುಂಬಿರುವ ನನ್ನ ಭಾವನೆಗಳನ್ನೆಲ್ಲ ಮಾತುಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ; ನಿಮಗೆ ಗೊತ್ತು ಮತ್ತು ನೀವು ಅವು ಗಳನ್ನು ಭಾವಿಸಬಲ್ಲಿರಿ. ಕೋಟ್ಯಂತರ ಜನ ಹೊಟ್ಟೆಗಿಲ್ಲದೆ, ಅಜ್ಞಾನ ದಿಂದ ನರಳುತ್ತಿರುವಾಗ ಅವರ ಹಣದಲ್ಲಿ ಶಿಕ್ಷಣ ಪಡೆದು ಅವರ ಬಗ್ಗೆ ಸ್ವಲ್ಪವೂ ಗಮನಕೊಡದ ಪ್ರತಿಯೊಬ್ಬರನ್ನೂ ನಾನು ದ್ರೋಹಿ ಎಂದು ಕರೆಯುತ್ತೇನೆ. ಹಸಿದ ಪಶುಗಳಂತೆ ಜೀವನ ಸಾಗಿಸುತ್ತಿರುವ ಈ ಇಪ್ಪತ್ತು ಕೋಟಿ ಬಡವರಿಗಾಗಿ ಏನನ್ನೂ ಮಾಡದೆ ಅವರನ್ನು ಅರೆದು ಹಣ ಗಳಿಸಿ ಆಡಂಬರ ಮಾಡುತ್ತ ಓಡಾಡುತ್ತಾರಲ್ಲ ಅವರನ್ನು ಅನಿಷ್ಟಗಳೆಂದು ಕರೆಯುತ್ತೇನೆ.

''ಇರುವ ಏಕೈಕ ಭಗವಂತ, ನಾನು ನಂಬುವ ಏಕೈಕ ಭಗವಂತ, ಎಲ್ಲ ಜೀವಿಗಳ ರೂಪದಲ್ಲಿ ಪ್ರಕಟನಾಗಿರುವ ಭಗವಂತನನ್ನು ಆರಾಧಿಸಲು ನಾನು ಮತ್ತೆ ಮತ್ತೆ ಹುಟ್ಟಿ ಬಂದು ಸಾವಿರಾರು ಕಷ್ಟಕೋಟಲೆಗಳನ್ನು ಅನುಭವಿಸಲು ಸಿದ್ಧನಿದ್ದೇನೆ. ಪಾಪಿ ದೇವ್ರೋ ಭವ, ದೀನ ದೇವೋ ಭವ; ಇಡೀ ಮಾನವ ಕುಲದಲ್ಲಿರುವ ಪಾಪಿಗಳು, ದೀನರು ಮತ್ತು ಬಡವರು ನನ್ನ ದೇವರು. ನಾನವರನ್ನು ವಿಶೇಷವಾಗಿ ಆರಾಧಿಸುತ್ತೇನೆ.''

## ಆಧುನಿಕ ಯುಗಕ್ಕೆ ನಾಲ್ಕು ಯೋಗಗಳ ಮರುವ್ಯಾಖ್ಯಾನ

ಭಾರತೀಯ ಸಂಸ್ಕೃತಿಗೆ ಸ್ವಾಮಿ ವಿವೇಕಾನಂದರ ಶ್ರೇಷ್ಠ ಕೊಡುಗೆಗಳಲ್ಲಿ ಮತ್ತೊಂದು, ಆಧುನಿಕ ಕಾಲಕ್ಕೆ ಯೋಗದ ಪ್ರಸ್ತುತತೆಯನ್ನು ವಿವರಿಸಿದ್ದು. ಶ್ರೀಕೃಷ್ಣ, ಭಗವದ್ಗೀತೆಯಲ್ಲಿ ಯೋಗ ಮತ್ತು ವೇದಾಂತಗಳನ್ನು ಸಮನ್ವಯಗೊಳಿಸಿ ಜನಪ್ರಿಯಗೊಳಿಸಲು ಪ್ರಯತ್ನಿಸಿದ. ಆದರೆ ಕಾಲಕ್ರಮೇಣ ವೇದಾಂತ ಜನಪ್ರಿಯವಾಗಿ ಯೋಗ ನೇಪಥ್ಯಕ್ಕೆ ಸರಿಯಿತು. ಸ್ವಾಮಿ ವಿವೇಕಾನಂದರು ನಾಲ್ಕು ಯೋಗಮಾರ್ಗಗಳಿಗೆ ಹೊಸ ವ್ಯಾಖ್ಯಾನಗಳನ್ನು ನೀಡಿ ಈ ನಾಲ್ಕು ಮಾರ್ಗಗಳನ್ನು ಸರಿಯಾಗಿ ಸಮನ್ವಯಗೊಳಿಸಿ ಪ್ರಯೋಗಿಸಿದರೆ ಆಧುನಿಕ ಕಾಲಕ್ಕೆ ಎಂತಹ ಪ್ರಯೋಜನಗಳಿವೆ ಎಂಬುದನ್ನು ತೋರಿಸಿಕೊಟ್ಟರು. ಸಾಂಪ್ರದಾಯಿಕ ನಾಲ್ಕು ಯೋಗಗಳನ್ನು ಇಂದಿನ ಕಾಲಕ್ಕೆ ಸೂಕ್ತವಾಗುವಂತೆ ಅದ್ಭುತವಾದ ಆಧ್ಯಾತ್ಮಿಕ ಪ್ರಾಯೋಗಿಕ ಕ್ರಮಗಳನ್ನಾಗಿ ಮಾರ್ಪಡಿಸಿದರು. ಕರ್ಮ–ಭಕ್ತಿ–ಜ್ಞಾನಗಳನ್ನು ಸಮನ್ವಯಗೊಳಿಸಿ ಇಂದಿನ ಕಾಲಕ್ಕೆ ತಕ್ಕಂತೆ ಸುಲಭಸಾಧ್ಯವಾಗಿಸಿದರು. ಎಲ್ಲಕ್ಕಿಂತ ಮಿಗಿಲಾಗಿ, ಕರ್ಮಯೋಗ ಮತ್ತು ರಾಜಯೋಗಗಳನ್ನು ಎಂತಹ ನಾಸ್ತಿಕರೂ ಅಭ್ಯಾಸಮಾಡಬಹುದು ಎಂಬುದನ್ನು ತಿಳಿಸಿಕೊಟ್ಟರು. ನಾಲ್ಕು ಯೋಗಗಳು ಮಾನವೀಯತೆಯ ನಾಲ್ಕು ವಿಭಿನ್ನ ಮುಖಗಳು; ಇವುಗಳ ಮೂಲಕ ಮೋಕ್ಷ ಸಾಧ್ಯ. ಕರ್ಮ–ಭಕ್ತಿ–ಜ್ಞಾನ ಮಾರ್ಗಗಳ ಮೂಲಕ ಅಂತಃಕರಣದ ಭಾವನಾತ್ಮಕ, ಬೌದ್ಧಿಕ, ಕ್ರಿಯಾತ್ಮಕ, ಮತ್ತು ಅತೀಂದ್ರಿಯ ಶಕ್ತಿಗಳನ್ನು ಅತ್ಯಂತ ದಕ್ಷವಾಗಿ ಬಳಸಿಕೊಂಡು ಉದ್ದೇಶಿತ ಗುರಿಯನ್ನು ಹೇಗೆ ತಲುಪಬಹುದು ಎಂಬುದನ್ನು ಅವರು ವಿವರಿಸಿದರು. ಈ ನಾಲ್ಕು ಯೋಗಮಾರ್ಗಗಳನ್ನು ಸೂಕ್ತವಾಗಿ ಸಮನ್ವಯಗೊಳಿಸಿದರೆ ಗುರಿಯನ್ನು ಇನ್ನಷ್ಟು ಬೇಗ ತಲುಪಬಹುದು ಎಂದು ಸಾರಿ ಹೇಳಿದರು.

## ನೂತನ ಮತ್ತು ಕ್ರಮಬದ್ಧ ರೀತಿಯಲ್ಲಿ ಸನಾತನ ಧರ್ಮದ ಪ್ರತಿಪಾದನೆ

ಭಾರತೀಯ ಸಂಸ್ಕೃತಿಗೆ ಸ್ವಾಮಿ ವಿವೇಕಾನಂದರ ಮತ್ತೊಂದು ಮಹೋನ್ನತ ಕೊಡುಗೆ ಎಂದರೆ ನೂತನ ಮತ್ತು ಕ್ರಮಬದ್ಧ ರೀತಿಯಲ್ಲಿ ಸನಾತನ ಧರ್ಮವನ್ನು ಪ್ರತಿಪಾದಿಸಿದ್ದು. ಸನಾತನ

ಧರ್ಮವೆಂಬ ಮಹಾವೃಕ್ಷಕ್ಕೆ ಅಸಂಖ್ಯ ಶಾಖೆಗಳು ಇವೆ. ಇವುಗಳಲ್ಲಿ ಪ್ರತಿಯೊಂದು ಶಾಖೆಯೂ ಮೂಲ ಸತ್ಯಗಳಲ್ಲಿ ಕೆಲವನ್ನು ಉಳಿಸಿಕೊಂಡು ಬಂದಿವೆ. ಸನಾತನ ಧರ್ಮ ಎಂದರೇನು, ಮತ್ತು ಈ ಶಾಖೋಪಶಾಖೆಗಳು ಹೇಗೆ ಒಂದೇ ಮಹಾ ವೃಕ್ಷಕ್ಕೆ ಸೇರಿವೆ ಎಂಬುದನ್ನು ಪ್ರಾತ್ಯಕ್ಷಿಕೆಗಳ ಮೂಲಕ ತೋರಿಸಿ ಕೊಟ್ಟಿದ್ದು ಶ್ರೀರಾಮಕೃಷ್ಣರು. ಅವರು ಹಲವಾರು ಮತಗಳನ್ನು ಅನುಸರಿಸಿ ಅವೆಲ್ಲ ಒಂದೇ ಗುರಿಯನ್ನು ಸೇರಲು ವಿಭಿನ್ನ ಪಥಗಳು ಎಂಬುದನ್ನು ಪ್ರತ್ಯಕ್ಷ ಕಂಡುಕೊಂಡು ಎಷ್ಟು ಮತಗಳೊ ಅಷ್ಟು ಪಥಗಳು, ಎಂದು ತಿಳಿಸಿದರು. ತಮ್ಮ ಗುರುದೇವನ ಮಹಾಮಹಿಮಾಮಯ ಜೀವನವನ್ನು ಪ್ರತ್ಯಕ್ಷ ಕಂಡಿದ್ದ ಸ್ವಾಮೀಜಿ, ಮತಾಂಧತೆಯಿಂದ ಸಿಲುಕಿ ನರಳುತ್ತಿರುವ ವಿಶ್ವಕ್ಕೆ ತಮ್ಮ ಗುರುದೇವರ ಸಂದೇಶಗಳನ್ನು ಬೋಧಿಸಿದರು.

## ರಾಷ್ಟ್ರದ ಸಂಸ್ಕೃತಿಯ ಪಾಲನೆಯ ಹೊಣೆ ಭಾರತೀಯ ಮಹಿಳೆಯ ಮೇಲಿದೆ

ಪ್ರತಿಯೊಂದು ರಾಷ್ಟ್ರದ ಆದರ್ಶ ಸ್ತ್ರೀತ್ವದ ಕಲ್ಪನೆಗಳು ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ವಿವರಿಸುತ್ತ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

''ಭಾರತದ ಆದರ್ಶ ಸ್ತ್ರೀ ಎಂದರೆ ತಾಯಿ, ತಾಯಿ... ತಾಯಿ... ತಾಯಿ. ಸ್ತ್ರೀ ಎಂಬ ಪದ ಕಿವಿಗೆ ಬಿದ್ದೊಡನೆ ಹಿಂದು ಮನಸ್ಸಿಗೆ ಮೊದಲು ಬರುವುದೇ ತಾಯ್ತನ. ನಮ್ಮಲ್ಲಿ ಭಗವಂತನನ್ನೂ ಜಗನ್ಮಾತೆ ಎಂದು ಕರೆಯುತ್ತೇವೆ. ಪಾಶ್ಚಿಮಾತ್ಯರ ಸ್ತ್ರೀ ಕಲ್ಪನೆ ಎಂದರೆ ಪತ್ನಿ. ಭಾರತದಲ್ಲಿ ಸಾಮಾನ್ಯರಿಗೆ ಸ್ತ್ರೀತ್ವದ ಶಕ್ತಿಯ ಪ್ರತೀಕ, ತಾಯ್ತನ. ಪಾಶ್ಚಿಮಾತ್ಯ ದೇಶಗಳಲ್ಲಿ ಪತ್ನಿಯು ಆಳುತ್ತಾಳೆ. ಭಾರತದಲ್ಲಿ ತಾಯಿ ಆಳುತ್ತಾಳೆ.''

ನಮ್ಮ ನಾಡಿನ ಅನುಪಮವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದೇ ತಾಯಂದಿರು ಎಂಬುದನ್ನು ಸ್ವಾಮೀಜಿ ಅರಿತಿದ್ದರು. ಭಾರತದಲ್ಲಿರುವಂತಹ ಸ್ತ್ರೀತ್ವದ ಮಾದರಿಗಳು ಇನ್ನಾವುದೇ ನಾಡಿನಲ್ಲೂ ಇಲ್ಲ. ಭಾರತದ ಸ್ತ್ರೀಯರು ಪಾಶ್ಚಿಮಾತ್ಯ ಸ್ತ್ರೀಯರ ತದ್ರೂಪಗಳಾಗುವುದು ಅವರಿಗೆ ಇಷ್ಟವಿರಲಿಲ್ಲ. ಇಲ್ಲಿನ ಕುಟುಂಬಗಳಿಗೆ ಭದ್ರವಾದ ಸಾಂಸ್ಕೃತಿಕ ನೆಲೆಗಟ್ಟನ್ನು ಒದಗಿಸಿರುವುದೇ ತಾಯಂದಿರು. ಅವರು ತಮ್ಮ ಈ ಕರ್ತವ್ಯದಿಂದ ಚ್ಯುತರಾಗಬಾರದು. ಹಾಗೆಂದ ಮಾತ್ರಕ್ಕೆ ಸ್ವಾಮೀಜಿ ಭಾರತೀಯ ಪುರುಷರು ಅಥವಾ ಸಮಾಜವು ಸ್ತ್ರೀಯರನ್ನು ನಡೆಸಿಕೊಳ್ಳುತ್ತಿದ್ದ ರೀತಿಯ ಬಗ್ಗೆ ಕುರುಡಾಗಿದ್ದರು ಎಂದರ್ಥವಲ್ಲ. ಅವರ ಸ್ತ್ರೀ ಸಬಲೀಕರಣವೆಂದರೆ ಸಂಪೂರ್ಣ ಸಬಲೀಕರಣ, ಅಲ್ಲಿ ಕೊಸರಿಗೆ ಸ್ಥಾನವಿಲ್ಲ. ಅದು ವೇದಾಂತವು ಹೇಳುವಂತಹ ಸಬಲೀಕರಣ. ೧೯೦೧ರಲ್ಲಿ ಎಂದರೆ ಅವರ ಮಹಾಸಮಾಧಿಗೆ ಕೇವಲ ಒಂದು ವರ್ಷ ಮೊದಲು, ಆಗಿನ್ನೂ ಅವರು ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿದ್ದರು, ಸಂಭಾಷಣೆಯೊಂದರ ನಡುವೆ ಸ್ತ್ರೀ ಸಬಲೀಕರಣದ ಬಗ್ಗೆ ಅವರು ಆವೇಶದಿಂದ ಹೇಳುತ್ತಾರೆ:

''ನಮ್ಮದು ವೇದಾಂತದ ನಾಡು. ಎಲ್ಲ ಜೀವಿಗಳಲ್ಲೂ ನೆಲೆಸಿರುವುದು ಆ ಭಗವಂತನೊಬ್ಬನೇ. ಅವನನ್ನೆ ನಾವು ಆತ್ಮ ಎಂದು ಕರೆಯುತ್ತೇವೆ. ಆದರೆ ಇಂತಹ ವೇದಾಂತದ ನಾಡಲ್ಲೆ ಸ್ತ್ರೀ-ಪುರುಷರ ನಡುವೆ ಅದೆಂತಹ ಭೇದ! ಮೂರು ಹೊತ್ತೂ ಸ್ತ್ರೀಯನ್ನು ದೂಷಿಸುತ್ತಿರುತ್ತೇವೆ. ಆದರೆ, ಅವರ ಏಳಿಗೆಯ ಬಗ್ಗೆ ಯಾರಾದರೂ ಏನಾದರೂ ಮಾಡಿದ್ದೀರೇನು? ಸ್ಮೃತಿಗಳು, ಇತ್ಯಾದಿ ಶಾಸ್ತ್ರಗ್ರಂಥಗಳಲ್ಲಿ ಅವಳಿಗಾಗಿ ಕಠೋರ ನಿಯಮಗಳನ್ನು ಮಾಡುವುದೇ ಆಗಿದೆ. ಪುರುಷರು ಆಕೆಯನ್ನೊಂದು ಹೆರುವ ಯಂತ್ರ ಎಂದುಕೊಂಡಿದ್ದಾರೆ! ಜಗನ್ಮಾತೆಯ ಪ್ರತಿರೂಪಗಳಾದ ಸ್ತ್ರೀಯರನ್ನು ನೀವಲ್ಲದೆ ಮತ್ತಾರು ಮೇಲೆತ್ತಬೇಕು?''

ಶಿಷ್ಯನೊಬ್ಬ ಸ್ತ್ರೀಯರಿಗೆ ಜ್ಞಾನ ಮತ್ತು ಭಕ್ತಿ ಲಭಿಸುವುದು ಕಷ್ಟ ಎಂಬರ್ಥ ಬರುವ ಮಾತುಗಳನ್ನಾಡಿದಾಗ ಸ್ವಾಮೀಜಿ ಕೆರಳಿದರು:

''ಅದು ಯಾವ ಶಾಸ್ತ್ರಗ್ರಂಥಗಳಲ್ಲಿ ನಿನಗೆ ಇಂಥ ಮಾತುಗಳು ಸಿಕ್ಕಿವೆ ಹೇಳು? ನಮ್ಮ ಸಂಸ್ಕೃತಿಯ ಅವನತಿಯ ಕಾಲದಲ್ಲಿ ಅರ್ಚಕ ವೃಂದವು ಇತರ ಜಾತಿಗಳವರಿಗೆ ವೇದಗಳ ಅಧ್ಯಯನದ ಅಧಿಕಾರವಿಲ್ಲ ಎಂದು ನಿಯಮ ಮಾಡಿದರು. ಸ್ತ್ರೀಯರ ಎಲ್ಲ ಹಕ್ಕುಗಳನ್ನೂ ಕಸಿದುಕೊಂಡುಬಿಟ್ಟರು. ವೇದಗಳ ಅಥವಾ ಉಪನಿಷತ್ತುಗಳ ಕಾಲದಲ್ಲಿ ಬ್ರಹ್ಮದ ಬಗ್ಗೆ ಚರ್ಚಿಸಿ ಮೈತ್ರೇಯಿ, ಗಾರ್ಗಿಯಂತಹ ಸ್ತ್ರೀಯರು ಋಷಿ ಪದವಿಗೇರಿಲ್ಲವೇನು? ವೇದ ಗಳಲ್ಲಿ ಉದ್ದಾಮ ಪಂಡಿತರಾಗಿದ್ದ ಒಂದು ಸಾವಿರ ಬ್ರಾಹ್ಮಣರ ಸಭೆಯಲ್ಲಿ ಬ್ರಹ್ಮದ ಬಗ್ಗೆ ಚರ್ಚೆ ಮಾಡಲು ಯಾಜ್ಞವಲ್ಕ್ಯರಿಗೆ ಪಂಥ ನೀಡುತ್ತಾಳೆ ಗಾರ್ಗಿ. ಅಂದು ಸ್ತ್ರೀಯರಿಗೆ ಸಾಧ್ಯವಾ ದುದು ಇಂದೇಕೆ ಆಗಲೊಲ್ಲದು? ಒಮ್ಮೆ ನಡೆದದ್ದು ಖಚಿತವಾಗಿ ಮತ್ತೊಮ್ಮೆ ನಡೆಯಬಹುದು. ಇತಿಹಾಸ ಮರುಕಳಿಸುತ್ತದೆ. ಸ್ತ್ರೀಯರನ್ನು ಸೂಕ್ತವಾಗಿ ಗೌರವಿಸಿದ ದೇಶಗಳೆಲ್ಲ ಶ್ರೇಷ್ಠವಾಗಿವೆ. ಯಾವ ದೇಶ ಮತ್ತು ಯಾವ ಜನರು ಸ್ತ್ರೀಗೆ ಗೌರವ ನೀಡುವು ದಿಲ್ಲವೋ ಆ ದೇಶ ಅಥವಾ ಜನರು ಎಂದಿಗೂ ಶ್ರೇಷ್ಠರಾಗಲು ಸಾಧ್ಯವೇ ಇಲ್ಲ. ನಿಮ್ಮ ಜನಾಂಗ ಇಷ್ಟು ಅವನತಿಗೆ ಇಳಿಯು ವುದಕ್ಕೆ ಕಾರಣ, ಈ ಜೀವಂತ ದುರ್ಗೆಯರ ಬಗ್ಗೆ ನಿಮ್ಮಲ್ಲಿ ಕಿಂಚಿತ್ತಾದರೂ ಗೌರವವಿಲ್ಲದಿರುವುದು.''

## ಸಮಗ್ರವಾದ ಚಿಂತನೆ

ಭಾರತೀಯ ಸಂಸ್ಕೃತಿಗೆ ಸ್ವಾಮೀಜಿಯವರ ಶ್ರೇಷ್ಠ ಕೊಡುಗೆಗಳಲ್ಲಿ ಮತ್ತೊಂದು ಎಂದರೆ ಮಾನವೀಯ ಚಿಂತನೆಗಳಲ್ಲಿ ಶ್ರೇಷ್ಠ ಅಂಶಗಳನ್ನು ತನ್ನೊಳಗೆ ಸಮ್ಮಿಳನಗೊಳಿಸಿಕೊಳ್ಳುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟಿರುವುದು. ಪೂರ್ವ-ಪಶ್ಚಿಮ, ವಿಜ್ಞಾನ-ಧರ್ಮ, ಲೌಕಿಕ-ಪಾರಮಾರ್ಥಿಕ ಎಂಬ ಭೇದಗಳಿಲ್ಲದೆ ಶ್ರೇಷ್ಠ

ವಾದ ವಿಚಾರಗಳನ್ನೆಲ್ಲ ಭಾರತೀಯ ಸಂಸ್ಕೃತಿ ಅಳವಡಿಸಿ ಕೊಳ್ಳಬೇಕು.

ಸಮಗ್ರ ಜೀವನವನ್ನೇ ದಿವ್ಯಗೊಳಿಸುವುದು, ಇದೇ ಸ್ವಾಮೀಜಿ ಯವರ ಅತ್ಯಂತ ಶಕ್ತಿಶಾಲಿ ವಿಚಾರ ಧಾರೆ. ಕೃತಿಶ್ರೇಣಿಯ ಆಂಗ್ಲ ಮೂಲಕ್ಕೆ ಮುನ್ನುಡಿ ಬರೆಯುತ್ತ ಸೋದರಿ ನಿವೇದಿತಾ ಹೇಳು ತ್ತಾರೆ: ''ಇನ್ನು ಮುಂದೆ ಇದು ಲೌಕಿಕ, ಇದು ಪಾರಮಾರ್ಥಿಕ ಎಂಬ ಭೇದಗಳೇ ಇರಬಾರದು.... ಭಾರತವು ಜೀವನದ ಪ್ರತಿ ಯೊಂದು ಕ್ರಿಯೆಯನ್ನೂ ಎಷ್ಟರಮಟ್ಟಿಗೆ ಆಧ್ಯಾತ್ಮೀಕರಿಸಿಬಿಟ್ಟಿದೆ ಎಂದರೆ ಪ್ರಾಯಶಃ ಲೌಕಿಕ ಎನ್ನುವಂತಹ ಯಾವುದೂ ಇಲ್ಲವೇ ಇಲ್ಲ. ಕಲೆ ಮತ್ತು ಸಾಹಿತ್ಯಗಳ ಆಧ್ಯಾತ್ಮೀಕರಣವಂತೂ ಎದ್ದು ಕಾಣುತ್ತದೆ. ಜೀವನ ಶ್ರೇಷ್ಠತೆಯನ್ನು ಮತ್ತು ವೈವಿಧ್ಯಮಯ ಸೌಂದರ್ಯವನ್ನು ಸಾರುವಂತಹ ಅನೇಕ ಪ್ರಕಾರಗಳ ನೃತ್ಯ, ಸಂಗೀತ, ಚಿತ್ರಕಲೆ ಮತ್ತು ಶಿಲ್ಪಕಲೆಗಳು ನಮ್ಮಲ್ಲಿವೆ.''

### ಕೊನೆಯದಾಗಿ

ಸೋದರಿ ನಿವೇದಿತಾ ಹೇಳುವಂತೆ: ''ಸ್ವಾಮೀಜಿ ಭಾರತದ ವಿಷಯದಲ್ಲಿ ಅತ್ಯಂತ ಭಾವುಕರಾಗುತ್ತಿದ್ದರು. ಭಾರತದ ಬಗ್ಗೆ ಚಿಂತಿಸದ ಕ್ಷಣವೇ ಇರುತ್ತಿರಲಿಲ್ಲ. ಅವರ ಹೃದಯ ಮತ್ತು ನಾಡಿಗಳು ಭಾರತ, ಭಾರತ ಎಂದೇ ಮಿಡಿಯುತ್ತಿದ್ದವು. ಅವರ ಕಲ್ಪನೆಗಳು ಮತ್ತು ಅವರ ಯೋಚನೆಗಳೆಲ್ಲ ಭಾರತದ ಬಗ್ಗೆಯೇ ಆಗಿತ್ತು. ಅಷ್ಟೇಕೆ, ಅವರೇ ಭಾರತವಾಗಿಬಿಟ್ಟಿದ್ದರು; ರಕ್ತ ಮಾಂಸ ಗಳಿಂದ ಕೂಡಿದ್ದ ಭಾರತ.''

ನೋಬೆಲ್ ಪುರಸ್ಕೃತ ಕವಿ ರವೀಂದ್ರನಾಥ ಠಾಕೂರರು ಸ್ವಾಮಿ ವಿವೇಕಾನಂದರ ಬಗ್ಗೆ ಹೀಗೆ ಹೇಳುತ್ತಾರೆ: ''ಇತ್ತೀಚಿನ ಕಾಲಘಟ್ಟಗಳಲ್ಲಿ ಇದನ್ನು ಮಾಡಿ, ಅದನ್ನು ಮಾಡಬೇಡಿ ಎಂಬು ದಷ್ಟಕ್ಕೇ ಸೀಮಿತವಾಗಿರದ ಮಹತ್ತರವಾದ ಸಂದೇಶವನ್ನು ನೀಡಿ ದವರೆಂದರೆ ಸ್ವಾಮಿ ವಿವೇಕಾನಂದರೊಬ್ಬರೇ. ದೇಶವಾಸಿಗಳೆಲ್ಲ ರನ್ನೂ ಸಂಬೋಧಿಸಿ ಅವರು ಹೇಳುತ್ತಾರೆ, 'ನಿಮ್ಮಲ್ಲಿ, ಪ್ರತಿ ಯೊಬ್ಬರಲ್ಲೂ ಆ ಬ್ರಹ್ಮದ (ಭಗವಂತನ) ಶಕ್ತಿ ಇದೆ; ಬಡವ ರಲ್ಲಿರುವ ಭಗವಂತನನ್ನು ನೀವು ಆರಾಧಿಸಿ' ಎಂದು ಹೇಳು ತ್ತಾರೆ. ಸ್ವಾಮೀಜಿಯವರ ಈ ಸಂದೇಶ, ಯುವಕರನ್ನು ಅತ್ಯಂತ ಶಕ್ತಿಯುತವಾಗಿ ಬಡಿದೆಬ್ಬಿಸಿದೆ. ಅವರ ಸಂದೇಶದ ಫಲವಾಗಿ ದೇಶದಲ್ಲಿ ಈಗ ಯುವಕರು ಬಗೆ ಬಗೆಯ ರೀತಿಗಳಲ್ಲಿ ದೇಶ ಸೇವೆ ಮಾಡುತ್ತಿದ್ದಾರೆ; ಬಲಿದಾನ ನೀಡುತ್ತಿದ್ದಾರೆ. ಅವರ ಈ ಸಂದೇಶ ಪ್ರತಿಯೊಬ್ಬರಲ್ಲೂ ಚೈತನ್ಯ ಹಾಗೂ ಶಕ್ತಿಗಳನ್ನು ತುಂಬುತ್ತಿದೆ. ಅವರಲ್ಲಿನ ಆತ್ಮಾಭಿಮಾನವನ್ನು ಬಡಿದೆಬ್ಬಿಸುತ್ತಿದೆ. ಅವರ ಸಂದೇಶವು ಮಾನವನಲ್ಲಿ ತುಂಬಿರುವ ಶಕ್ತಿ ಸೀಮಿತ ಅವಧಿಗೆ ಅಥವಾ ಸೀಮಿತ ಉದ್ದೇಶಕ್ಕೆ ಮಾತ್ರ ಪ್ರಯೋಜನಕ್ಕೆ


with Best Compliments from

SVR AGENCIES




No. 2, 3rd Cross, P.B. No. 6976, Kalasipalyam New Extension Bangalore-560 002
Tel: 080-41224047 / 22222301
E-mail: svragri@gmail.com, svrplast@gmail.com

Distributors:
ASPEE- Agricultural Sprayers & Implements like Farm Mechanization Ezuipments, Brush Cutters, Rotary Tillers, Tractor mounted Power Sprayers, HTP Power Sprayers, High Pressure Knapsack Power & Manual Sprayers Battery Sprayers, Gator, Marut, Napsak, Hitech Sprayers & Spray Nozzles.
DSM (Divin: Engineering Plastics) -- Plastic Granules (Industrial Input) Akulon®PA6/PA66 | Arnite®PET/PBT | Arnitel®TPC | Stany®PA46

